KSSIDC
Karnataka State Small Industries Development Corporation Ltd.
(A Government of Karnataka Undertaking)
Regd. Office : A.O. Building, Industrial Estate, Rajajinagar, Bangalore - 560 010
Telephone : 080 - 2340 7011 to 25, Fax : 91-080-2314 3566 / 2338 9070 Grams : MYSMALCORP
E-mail : kssidcho@vsnl.com Website : www.kssidc.kar.nic.in

ಸಂಖ್ಯೆ:ವಾಣಿಜ್ಯ:ವಹಿವಾಟು:ಬಾಡಿಗೆ:ಗೋದಾಮು:2022-23 ದಿನಾಂಕ **15.07.2022**

## ಪತ್ರಿಕಾ ಪ್ರಕಟಣೆ

ಕೈಗಾರಿಕಾ ವಸಾಹತು, ಗೋಕುಲ ರಸ್ತೆ ಹುಬ್ಬಳ್ಳಿಯಲ್ಲಿರುವ ಗೋದಾಮು ಸಂಖ್ಯೆ-1 & 2 ಹಾಗೂ ಉದ್ಯಮ್‌ಬಾಗ್ ಬೆಳಗಾಂನಲ್ಲಿರುವ ಗೋದಾಮು ಸಂಖ್ಯೆ-1 & 2 ಗಳ ಹಾಗೂ ತೆರೆದ ಗೋದಾಮುಗಳು (Closed Godowns & Open Yard & Compound) ಗಳು ಬಾಡಿಗೆ/ಪಿಪಿಪಿ ಮಾದರಿಯಲ್ಲಿ ಲಭ್ಯವಿದ್ದು, ಆಸಕ್ತಿಯುಳ್ಳ ಕೈಗಾರಿಕಾ ಸಂಘ ಸಂಸ್ಥೆಗಳು ಸದರಿ ಗೋದಾಮುಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಸಾಮಾಗ್ರಿಗಳಾದ ಕಬ್ಬಿಣ ಮತ್ತು ಉಕ್ಕು ಸಾಮಾಗ್ರಿಗಳನ್ನು ಮೂಲ ಉತ್ಪಾದಕರಿಂದ ಸಂಗ್ರಹಿಸಿ/ಖರೀದಿಸಿ ಸಣ್ಣ ಕೈಗಾರಿಕಾ ಉದ್ದಿಮೆದಾರರಿಗೆ ಯೋಗ್ಯ ದರದಲ್ಲಿ ವಿತರಿಸಲು ಇಚ್ಛಿಸುವವರಿಗೆ ಬಾಡಿಗೆ/ಪಿಪಿಪಿ ಮಾದರಿಯಲ್ಲಿ ನೀಡಲು ನಿಗಮವು ಉದ್ದೇಶಿಸಿರುತ್ತದೆ. ಈ ಉದ್ದೇಶಕ್ಕೆ ಬಾಡಿಗೆ / ಪಿಪಿಪಿ ಮಾದರಿಯಲ್ಲಿ ಪಡೆಯಲು ಇಚ್ಛಿಸುವವರು ತಮ್ಮ ಸ್ವ ವಿವರಣೆಯೊಂದಿಗೆ ಅರ್ಜಿಯನ್ನು ದಿನಾಂಕ **30.07.2022** ರ ಸಾಯಂಕಾಲ **5.00** ಗಂಟೆ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಷರತ್ತು ಹಾಗೂ ನಿಬಂಧನೆಗಳಿಗಾಗಿ ನಿಗಮದ ವೆಬ್ ಸೈಟ್ www.kssidc.co.in ನಲ್ಲಿ ಲಭ್ಯವಿದೆ.

ವ್ಯವಸ್ಥಾಪಕ ನಿರ್ದೇಶಕರು,
ಕ.ರಾ.ಸ.ಕೈ.ಅ.ನಿ.ನಿ., ಬೆಂಗಳೂರು

KSSIDC
Karnataka State Small Industries Development Corporation Ltd.
(A Government of Karnataka Undertaking)
Regd. Office : A.O. Building, Industrial Estate, Rajajinagar, Bangalore - 560 010
Telephone : 080 - 2340 7011 to 25, Fax : 91-080-2314 3566 / 2338 9070 Grams : MYSMALCORP
E-mail : kssidcho@vsnl.com Website : www.kssidc.kar.nic.in

## ಷರತ್ತು ಮತ್ತು ನಿಬಂಧನೆಗಳು (ಬಾಡಿಗೆಗೆ)

1. ಗೋಕುಲ ರಸ್ತೆ , ಹುಬ್ಬಳ್ಳಿಯಲ್ಲಿರುವ ಗೋದಾಮು ಸಂಖ್ಯೆ ಜಿ-1&2ರ ಅಳತೆ 116.28 ಚ.ಮೀ ಅಳತೆಯ ಎರಡು ಗೋದಾಮುಗಳು(ಕಟ್ಟಿದ) ತೆರೆದ ಸ್ಥಳ (ಕಂಪೌಂಡ ಸಹಿತ 352.64 ಚ.ಮೀ.
2. ಉದ್ಯಮಬಾಗ, ಬೆಳಗಾವಿಯಲ್ಲಿರುವ ಗೋದಾಮು ಸಂಖ್ಯೆ ಜಿ-1 & 2 ರ ಅಳತೆ 115.52 ಚ.ಮೀ ಅಳತೆಯ ಎರಡು ಗೋದಾಮು (ಕಟ್ಟಡ) ತೆರೆದ ಸ್ಥಳ (ಕಂಪೌಂಟ ಸಹಿತ 273.60 ಚ.ಮೀ.
3. ಬಾಡಿಗೆ (Closed Godown) / (Open Yard with Compound) ಕ್ಕೆ ಆಯಾ ಸ್ಥಳಕ್ಕೆ ಅನ್ವಯವಾಗುವಂತೆ ದರ ಪ್ರತಿ ಚಮೀ.ಗೆ ಪ್ರತ್ಯೇಕವಾಗಿ ಸೂಚಿಸಬೇಕು.
4. ಸದರಿ ಗೋದಾಮುಗಳನ್ನು ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿಗಳ ವ್ಯವಹಾರಕ್ಕಾಗಿ ಮಾತ್ರ ಬಳಸಬೇಕು.
5. ಸದರಿ ವ್ಯವಹಾರಕ್ಕೆ ಬೇಕಾಗುವ ಮಾರಾಟ ಲೈಸೆನ್ಸ್ ಇತರೆ ಎಲ್ಲವನ್ನು ಸಂಬಂಧಿಸಿದ ಇಲಾಖೆಗಳಿಂದ ತಾವೇ ನೇರವಾಗಿ ಪಡೆಯಬೇಕು.
6. ಬಾಡಿಗೆ 11 ತಿಂಗಳ ಕರಾರಿಗೆ ಒಳಪಟ್ಟಿರುತ್ತದೆ. 11 ತಿಂಗಳ ನಂತರ ಪ್ರಸ್ತುತ ಬಾಡಿಗೆಗೆ ಶೇ.20 ರಷ್ಟು ಹೆಚ್ಚಿಸಿ ಹೊಸ ಕರಾರು ಪತ್ರ ನವೀಕರಿಸುವುದು.
7. ಮೂಲ ಉತ್ಪಾದಕರಾದ M/S SAIL, M/S RINL, M/S JSW Ltd, & M/S Arsal Mittal ಗಳಿಂದ ಕಬ್ಬಣ ಮತ್ತು ಉಕ್ಕು ಖರೀದಿಸಿ ಸಣ್ಣ ಕೈಗಾರಿಕೆಗಳಿಗೆ ಯೋಗ್ಯ ದರದಲ್ಲಿ ವಿತರಿಸಬೇಕು. ಇದರಲ್ಲಿ ನಿಗಮದ ಜವಾಬ್ದಾರಿ ಯಾವುದೂ ಇರುವುದಿಲ್ಲ.
8. ಗೋದಾಮುಗಳಲ್ಲಿ ಕಟ್ಟಡದ ಬದಲಾವಣೆಗೆ ಅವಕಾಶವಿರುವುದಿಲ್ಲ.
9. ಸದರಿ ಕಾಮಗಾರಿಗೆ ಪ್ರತಿ ಸ್ಥಳಕ್ಕೆ ಪ್ರತ್ಯೇಕವಾಗಿ ಭದ್ರತಾ ಠೇವಣಿ ರೂ.5.00 ಲಕ್ಷ ದ ಹುಂಡಿ ಕೆ.ಎಸ್ಎಸ್.ಐ.ಡಿ.ಸಿ. ಲಿ., ಬೆಂಗಳೂರು ಹೆಸರಿಗೆ ಇರಬೇಕು. ಸದರಿ ಭದ್ರತಾ ಠೇವಣಿಗೆ ಯಾವುದೇ ಬಡ್ಡಿ ಪಾವತಿಸುವುದಿಲ್ಲ.
10. ಬಾಡಿಗೆ ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಪಾವತಿಸತಕ್ಕದ್ದು. ವಿಳಂಬಕ್ಕೆ ಬ್ಯಾಂಕ್ ಬಡ್ಡಿ ವಿಧಿಸಲಾಗುವುದು.
11. ಗೋದಾಮುಗಳ ವಿಮೆ ಪ್ರತಿ ಸ್ಥಳಕ್ಕೆ ಪ್ರತ್ಯೇಕವಾಗಿ ರೂ.50.00 ಲಕ್ಷಗಳಿಗೆ ನೀಡಬೇಕು.
12. ಯಾವುದೇ ಗೋದಾಮುಗಳಿಗೆ ಆಗುವ ಹಾನಿಯನ್ನು ತಮ್ಮ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.
13. ಕಚ್ಚಾ ಸಾಮಗ್ರಿಯ ಖರೀದಿ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದ ಸಿಬ್ಬಂದಿಯನ್ನು ತಾವೇ ನೇಮಿಸಿಕೊಳ್ಳುವುದು.
14. ಸದರಿ ಗೋದಾಮುಗಳಲ್ಲಿ ಇರುವ ವಿದ್ಯುತ್ ಹಾಗೂ ದೂರವಾಣಿ ಬಿಲ್ಲನ್ನು ತಾವೇ ಭರಿಸಬೇಕು.
15. ಕಚ್ಚಾ ಸಾಮಗ್ರಿಗಳ ವ್ಯವಹಾರದ ಉದ್ದೇಶಕ್ಕಾಗಿ ನೀಡುರುವ ಗೋದಾಮುಗಳಲ್ಲಿ ಬೇರೆ ಚಟುವಟಿಕೆ ಮಾಡಿದಲ್ಲಿ ಹಂಚಿಕೆ ರದ್ದುಪಡಿಸಲಾಗುವುದು.
16. ನಿಗಮದ ಅಧಿಕಾರಿಗಳು ಆಗಾಗ ಸ್ಥಳ ಪರಿಶೀಲನೆಗೆ ಅವಕಾಶವಿರುತ್ತದೆ.

KSSIDC

**Karnataka State Small Industries Development Corporation Ltd.**

(A Government of Karnataka Undertaking)

**Regd. Office :** A.O. Building, Industrial Estate, Rajajinagar, Bangalore - 560 010

**Telephone :** 080 - 2340 7011 to 25, **Fax :** 91-080-2314 3566 / 2338 9070 **Grams** : MYSMALCORP

**E-mail :** kssidcho@vsnl.com **Website** : www.kssidc.kar.nic.in

17. ಪಿ.ಪಿ.ಪಿ. ಮಾದರಿಯಲ್ಲಿ ಪ್ರಸ್ತಾವನೆ ಸಲ್ಲಿಸಲು ಇಚ್ಛಿಸದ್ದಲ್ಲಿ ಸೂಕ್ತ ಪ್ರಸ್ತಾವನೆ ತಯಾರಿಸಿ ಸಲ್ಲಿಸುವುದು.
18. ಅರ್ಜಿ ಪತ್ರದಲ್ಲಿ ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಸದ್ಯ ಇರುವ ಕಾರ್ಯ ಚಟುವಟಿಕೆ ಬಗ್ಗೆ ಸಂಕ್ಷಿಪ್ತ ಮಾಹಿತಿ , **3** ವರ್ಷದ ಆದಾಯ ತೆರಿಗೆ ತಿರುವಳಿ / ಹೊಂದಿರುವ ಜಿಎಸ್ ಟಿ ಸಂಖ್ಯೆ ಹಾಗೂ ಹೊಂದಿರುವ ಲೈಸನ್ಸ್‌ಗಳ ಛಾಯಾ ಪ್ರತಿಯೊಂದಿಗೆ ಅರ್ಜಿ ಸಲ್ಲಿಸಬೇಕು
19. ಇತರೆ ಷರತ್ತು ಮತ್ತು ನಿಭಂದನೆಗಳು ಅವಶ್ಯಕತೆ ಇದ್ದಲ್ಲಿ ಒಪ್ಪಂದದ ಸಂದರ್ಭದಲ್ಲಿ ತಿಳಿಸಲಾಗುವುದು.
20. ಈ ಪ್ರಕಟಣೆಯ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ ಪೂರ್ಣ ಅಧಿಕಾರ ಈ ಕೆಳ ರುಜುದಾರರಿಗೆ ಇರುತ್ತದೆ.
21. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲುಶ್ರೀ ಜಿ.ಮಲ್ಲಪ್ಪ. ಉಪ ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಬೆಂಗಳೂರು, ದೂರವಾಣಿ ಸಂಖ್ಯೆ **8884415800,** ಶ್ರೀ ಧನಕರ. ಬಸವರಾಜ, ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈವ), ಬೆಂಗಳೂರು ವಿಭಾಗ ದೂರವಾಣಿ ಸಂಖ್ಯೆ **9513316637**, ಶ್ರೀ ದಿನೇಶ. ಜವಳೆ, ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಹುಬ್ಬಳ್ಳಿ ಹಾಗೂ ಬೆಳಗಾವಿ ವಿಭಾಗ ದೂರವಾಣಿ ಸಂಖ್ಯೆ **8884415796 / 9986684349**

ವ್ಯವಸ್ಥಾಪಕ ನಿರ್ದೇಶಕರು

ಕ.ರಾ.ಸ.ಕೈ.ಅ.ನಿ.ನಿ, ಬೆಂಗಳೂರು